ಅಭಿಯಾನವೇ. ಮತ್ತು ಅವರೇನೂ ಅದನ್ನು ಸದ್ದು ಗದ್ದಲವಿಲ್ಲದೇ ಮಾಡುವುದಿಲ್ಲ. ಪತಂಜಲಿಗೆ ತಿಲಾಂಜಲಿ ಕೊಡುವವರಂತೆ ತಮ್ಮ ಸ್ಪೀಕರ್ ಆನ್ ಮಾಡಿ ಸೋ... ಹಂ ಎಂಬ ಟ್ಯೂನು ಹಾಕಿಕೊಂಡೇ ಮಾಡುತ್ತಾರೆ. ಇವರ ಕೀರಲು ದನಿಯ ಸೋಹಂ ಕೇಳಿ ನಾಯಿಗಳು ಊಳಿಡುವುದು ಮತ್ತಷ್ಟು ಹೆಚ್ಚುತ್ತದೆ. ಇನ್ನು ಅಲ್ರಾಂ ಯಾಕೆ ಬೇಕು ಹೇಳಿ.

ಅವನು ಎದ್ದು ಕಿಚನ್ನಿಗೆ ಹೋಗಿ ಅಲ್ಲಿ ದೇವಕಿ ಮಾಡಿಟ್ಟ ಟೀ ಕುಡಿದು ಈಚೆ ಬರುವಷ್ಟರಲ್ಲಿ ಪಕ್ಕದ ದುರ್ಗಿಗುಡಿಯಿಂದ ಲಲಿತಾ ಸಹಸ್ರನಾಮ, ಸಪ್ತಶತಿ ಎಲ್ಲ ಸುರುವಾಗುತ್ತದೆ. ಆ ಧ್ವನಿಯಂತೂ ಕಿವಿಗೆ ಬೋರ್ವೆಲ್ ಕೊರೆಯುವಷ್ಟು ತೀಕ್ಷ್ಣ. ಹಾಗಾಗಿ ಅದನ್ನು ಸಹಿಸಲಾರದೆ, ಕೇಳಲಾರದೆ ಕೆಳಗಿನ ಫ್ಲ್ಯಾಟಿನ ರಾಜಾರಾಮ ಅವನ ಸ್ಪೀಕರ್ ಆನ್ ಮಾಡಿ ಭೀಮಸೇನ್ ಜೋಶಿಯವರ ಭಜನೆ ಹಾಕುತ್ತಾನೆ. ಕರುಣಾಕರನೀ| ನೆನ್ನುವುದ್ಯಾತಕೊ| ಭರವಸೆಯಿಲ್ಲೆನಗೆ ಎಂದು ಭೀಮಸೇನ ಜೋಶಿ ಅಲವತ್ತುಕೊಳ್ಳುವಾಗ ಎಂಥವರಿಗೂ ಭರವಸೆ ಕರಗಿ ನೀರಾಗಲೇ ಬೇಕು.

ಅದೇ ಹೊತ್ತಿಗೆ ಮೇಲಿನ ಫ್ಲ್ಯಾಟಿನ ರಾಧಾಕೃಷ್ಣ ಮತ್ತು ಅವನ ಇಬ್ಬರು ಗಂಡು ಮಕ್ಕಳು ಮನೆಯೊಳಗೇ ಜಾಗಿಂಗ್, ಕರಾಟೆ ಮುಂತಾದ ವ್ಯಾಯಾಮ ಸುರು ಹಚ್ಚಿಕೊಂಡು ರೂಮಿನಲ್ಲೇ ಇದ್ದರೆ ನಿರಂತರವಾಗಿ ತಲೆಗೆ ಮೊಟಕುತ್ತಿರುವ ಅನುಭವಕ್ಕೆ ತಲೆಯೊಡ್ಡಬೇಕಾಗುತ್ತದೆ ಎನ್ನುವ ಕಾರಣಕ್ಕಾದರೂ ಶೇಷಗಿರಿ ಪೇಪರ್ ಮಡಿಚಿ ಇಟ್ಟು, ಸ್ನಾನಕ್ಕೆ ಇಳಿಯುತ್ತಾನೆ.

ಏನು ಮಾಡಿದರೂ ಎಂಟೂ ನಲವತ್ತಕ್ಕೆ ಮುನ್ನ ಮನೆ ಬಿಟ್ಟು ಹೊರಡುವುದು ಸಾಧ್ಯವಿಲ್ಲ. ಇವತ್ತು ಕೆಳಗೆ ಪಾರ್ಕಿಂಗ್ ಲಾಟಿನಲ್ಲಿ ಏನೋ ಗಲಾಟೆ. ಯಾರೋ ದೀಪಾವಳಿಗೆ ಹೊಸ ಕಾರು ತಂದಿದ್ದಾರಂತೆ, ನಿಲ್ಲಿಸಲು ಸ್ಥಳವಿಲ್ಲ. ಟೂವೀಲರ್ ಇದ್ದವರೆಲ್ಲ ಒಬ್ಬೊಬ್ಬರಾಗಿ ಕಾರು ತಗೊಳ್ತಾ ಇದ್ದರೆ ನಿಲ್ಲಿಸುವುದಕ್ಕೆ ನಾನೆಲ್ಲಿಂದ ಜಾಗ ಕೊಡಲಿ ಎಂದು ಫ್ಲ್ಯಾಟಿನ ಸಕ್ರೆಟರಿ ದಿಗಂಬರ ಮಲ್ಯ, ಅರೆ ದಿಗಂಬರನಾಗಿದ್ದೇ ಥಕಥಕ ಕುಣಿದಾಡುತ್ತ ವಾದಿಸುತ್ತಿದ್ದ. ಇನ್ನು ಇದಕ್ಕೆ ಕಿವಿಕೊಟ್ಟರೆ ದೇವರೇ ಗತಿ ಎಂದು ಶೇಷಗಿರಿ ಹೇಗೋ ತಲೆತಪ್ಪಿಸಿಕೊಂಡು ಗೇಟಿನಿಂದ ಹೊರಬಿದ್ದ.

ಬಸ್ ಸ್ಟ್ಯಾಂಡಿನಲ್ಲಿ ಯಾವತ್ತೂ ಸಿಗುವ ಗೋಕುಲ ಇವತ್ತೂ ಎಡಗೈಯಿಂದ ಮೂಗಿನ ಹೊಳ್ಳೆಗಳನ್ನು ಕೆರೆದು ಕೆರೆದು ಕೊಳೆ ತೆಗೆಯುತ್ತ ನಿಂತಿದ್ದ. ಅವನನ್ನು ಕಂಡಿದ್ದೇ ಶೇಷಗಿರಿಗೆ ಮೂಡ್ ಕೆಡುತ್ತದೆ. ಇನ್ನು ಸ್ವಲ್ಪ ಹೊತ್ತಿಗೆ ಬಸ್ಸು ಬರದಿದ್ದರೆ ಅವನು ಯಡಿಯೂರಪ್ಪ, ಕುಮಾರ ಸ್ವಾಮಿ, ದೇವೇಗೌಡ, ಸಿದ್ದರಾಮಯ್ಯ, ಜಯಲಲಿತಾ ಎಂದು ಒಬ್ಬರನ್ನೂ ಬಿಡದೆ ಬೋಳಿಮಗ, ರಂಡೆ ಮಗ ಎಂದು ಎಷ್ಟೆಲ್ಲ ಮಗಂದಿರು ಇರಲು ಸಾಧ್ಯವೋ ಅಷ್ಟೂ ಮಗಂದಿರ ಜಾತಕ ತೊಳೆಯುವುದು ಖಚಿತವೇ. ಎಲ್ಲರೂ ಭ್ರಷ್ಟರು, ಹಗರಣಗಳಲ್ಲಿ ಸಿಕ್ಕಿಕೊಂಡವರು, ನಮ್ಮ ಮನೆಯ ನಲ್ಲಿಯಲ್ಲಿ ನೀರು ಬರದಂತೆ, ಸಂಜೆ ನಂತರ ಸರಿಯಾಗಿ ಕರೆಂಟು ಸಿಗದಂತೆ, ಅಡುಗೆಗೆ ಗ್ಯಾಸು ಸಿಗದಂತೆ ಮಾಡಿದವರೇ. ಬಯ್ಯುವುದು ನ್ಯಾಯವೇ. ಆದರೆ ಬೆಳಿಗ್ಗೆ ಬೆಳಿಗ್ಗೆ ಅಲ್ಲಿ ಆಫೀಸಿನಲ್ಲಿ ಬಾಕಿಯಿಟ್ಟಿರುವುದೆಲ್ಲ ಒಂದೊಂದಾಗಿ ನೆನಪಾಗತೊಡಗುವ ಹೊತ್ತಿನಲ್ಲಿ ಶೇಷಗಿರಿಗೆ ಇದು ಬೇಡ. ಆದರೆ ಅವನ ಬೇಕು ಬೇಡ ಕೇಳುವವರು ಯಾರು!

"ನಿಮ್ಮ ಊರಿನಲ್ಲಿ ಒಂದು ಮರ್ಡರ್ ಆಗಿದೆಯಲ್ಲ ಮಾರಾಯ್ರೆ!"

"ಅರೆ! ಹೌದಾ? ಎಲ್ಲಿ?"

"ಅಯ್ಯೊ ನಿಮ್ಗೆ ಗೊತ್ತಿಲ್ವ! ಅಲ್ಲೇ ನಿಮ್ಮ ಫ್ಲ್ಯಾಟಿನ ಹತ್ತಿರ ದೇವಸ್ಥಾನ ಇಲ್ವ, ಅದರ ಕಾಂಪೌಂಡಿನಲ್ಲೇ! ದಯ್ಜೀ ವರ್ಲ್ಡ್ ನೋಡಿಯಂತೆ, ಎಲ್ಲ ಹಾಕಿದ್ದಾರೆ. ನಾನು ಬೆಳಿಗ್ಗೆ ಬರುವಾಗ

